ಸಿ.ಸಿ .ನಂ. 214/2022 ಪಿಡಬ್ಲೂಃ 1

ದಿನಾಂಕಃ 22-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್.ಎಂ.ಎನ್. ವಕೀಲರಿಂದಃ**

ಸಾಲದ ಖಾತೆಯಲ್ಲಿ ನಮೂದಿಸಿದಂತಹ ಇನ್ಸುರನ್ಸ ನಮ್ಮ ಸಂಸ್ಥೆಯಿಂದ ಮಾಡಲಾಗಿರುತ್ತದೆ . ಇನ್ಸುರನ್ಸ ಮಾಡಿದ ಬಗ್ಗೆ ದಾಖಲಾತಿ ಪ್ರಧಾನ ಕಚೆರಿಯಲ್ಲಿ ಇರುತ್ತದೆ . ಆ ದಾಖಲಾಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಕೇಳಿ ಹೇಳಬೇಕು ಎಂದು ನುಡಿಯುತ್ತಾ . ಇನ್ಸುರನ್ಸಗೆ ಸಂಬಂದಪಟ್ಟಂತ ದಾಖಲಾತಿ ಪ್ರಧಾನ ಕಚೇರಿಯರು ನಿರ್ವಹಣೆ ಮಾಡುತ್ತಾರೆ. ಇನ್ಸುರನ್ಸ ಮೊತ್ತವನ್ನು ವರ್ಷಕ್ಕೊಮ್ಮೆ ಕಡಿತ ಮಾಡುತ್ತೇವೆ. ಲೋನ್ ತೆಗೆದುಕೊಂಡ ನಂತರ ಪ್ರತಿವರ್ಷ ಡಿಡಕ್ಟ ಮಾಡಿರುತ್ತೇವೆ.

ಆರೋಪಿ ಸಾಲವನ್ನು ಪಡೆಯುವ ಸಮಯದಲ್ಲಿ ನಾನು ಫಿರ್ಯಾದಿ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆರೋಪಿಗೆ ಯಾವುದೇ ಓದು ಬರಹ ಬರುವುದಿಲ್ಲ , ಕೇವಲ ಕನ್ನಡದಲ್ಲಿ ಸಹಿಯನ್ನು ಹಾಕುತ್ತಾರೆ ಎಂದರೆ ಗೊತ್ತಿಲ್ಲ . ಅವರ ಸಾಲಕ್ಕೆ ಸಂಬಂಧಪಟ್ಟಂತ ಎಲ್ಲ ದಾಖಲಾತಿಗಳನ್ನು ನಾವೇ ಬರೆದುಕೊಂಡಿದ್ದೇವೆ ಎಂದರೆ ಸರಿ. ಸದರಿ ಹಸ್ತಾಕ್ಷರ ನಮ್ಮ ಸಿಬ್ಬಂದಿ ಶಿವರಾಜ ಹೆಗಡೆಯವರದ್ದಾಗಿರುತ್ತದೆ. ಸಾಲವನ್ನು ಪಡೆದ ನಂತರ ಆರೋಪಿ ಎರಡು ಕಂತು ಕಟ್ಟಿರುತ್ತಾರೆ . ಎರಡು ಕಂತುಗಳ ಒಟ್ಟೂ ಮೊತ್ತ ಎಷ್ಟು ಎಂದು ನಾನು ಈಗ ನೋಡಿಲ್ಲ .ಗಣಕಯಂತ್ರದಲ್ಲಿರುವ ಖಾತೆಯನ್ನು ಹೊರೆತುಪಡಿಸಿ ನಾವು ಕೈಬರಹದಲ್ಲಿ ಖಾತೆಗೆ ಸಂಬಂದಪಟ್ಟಂತೆ ಲೆಡ್ಜರ್ ಇದೆ. ಲೆಡ್ಜರನಲ್ಲಿ ನಮೂದು ಮಾಡಿದ ವಿವರಣೆ ಹಾಗೂ ಗಣಕಯಂತ್ರದಲ್ಲಿ ನಮೂದು ಮಾಡಿದ ವಿವರಣೆ ಎರಡೂ ಒಂದೇ ಆಗಿರುತ್ತದೆ . ನ್ಯಾಯಾಲಯಕ್ಕೆ ಪ್ರಕರಣವನ್ನು ದಾಖಲು ಪಡಿಸಿದಾಗ ಕೈ ಬರಹದಲ್ಲಿ ಬರೆದಿರುವ ಲೆಡ್ಜರನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ವೈಯಕ್ತಿಕ ಸಾಲವನ್ನು ನೀಡುವಾಗ 10,000/- ಎಫ್.ಡಿ., 5 ಪರ್ಸಂಟ ಎಂದರೆ ರೂ.2,500/- ಪಡೆದುಕೊಳ್ಳುತ್ತೇವೆ. ಎಫ್.ಡಿ. ಮೊತ್ತವನ್ನು ಡಿಡಕ್ಟ ಮಾಡಿ ಸಾಲದ ಹಣವನ್ನು ಸಾಲಗಾರರಿಗೆ ಕೊಡುತ್ತೇವೆ ಎಂದರೆ ಸರಿ . ರೂ. 2,500/- ಸಾಲದ ಹಣದಲ್ಲಿ ಡಿಡಕ್ಟ ಮಾಡಿರುತ್ತೇವೆ. ಸಾಲಗಾರರು ರೂ . 2,500/- ಕಟ್ಟಿದ್ದರೆ ಅದನ್ನು ಸಾಲದ ಹಣದಲ್ಲಿ ಡಿಡಕ್ಟ ಮಾಡುವುದಿಲ್ಲ . ಒಂದಾನುವೇಳೆ ಕೊಡದೆ ಇದ್ದರೆ ರೂ . 2500/- ಸಾಲದ ಹಣದಲ್ಲಿ ಡಿಡಕ್ಟ ಮಾಡಲಾಗುತ್ತದೆ. ರೂ. 10,000/- ಎಫ್.ಡಿ. ಹಾಗೂ 2,500/- ಸಾಲದ ಹಣದಲ್ಲಿ ಡಿಡಕ್ಟ ಮಾಡಿದ್ದೇವೆ ಎಂದರೆ ಸರಿ . ಈ ಎರಡು ಹಣವನ್ನು ಸಾಲದಿಂದ ಹಣದಿಂದ ಡಿಡಕ್ಟ ಮಾಡಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ

ಪಿಡಬ್ಲೂಃ 1

ಹಾಜರುಪಡಿಸಿಲ್ಲ. ಇನ್ನೊಂದು ಸಾಲದ ಖಾತೆ ಶಿವಾನಂದ ಆಚಾರಿಯವರ ಸಾಲದ ಹಣವನ್ನು ರೂ. 10,000/- ಹಾಗೂ ರೂ 2,500/- ಡಿಡಕ್ಟ ಮಾಡಿದ್ದೇವೆ. ಈ ಡಿಡಕ್ಟ ಮಾಡಿದ ಅಮೌಂಟ ಬಗ್ಗೆ ವಿಥಡ್ರಾವಲ್ ನಲ್ಲಿ ತೋರಿಸುತ್ತೇವೆ ಹಾಗೂ ಲೆಡ್ಜರ್ ನಲ್ಲಿ ಬರೆದಿರುತ್ತೇವೆ . ನೋಟಿಸ್ ನಲ್ಲಾಗಲೀ ಫಿಯಾರ್ದಿನಲ್ಲಾಗಲೀ ಈ ರೀತಿ ಹಣವನ್ನು ಡಿಡಕ್ಟ ಮಾಡಿದ ಬಗ್ಗೆ ಬರೆದಿಲ್ಲ ಎಂದರೆ ಸರಿ . ಅದನ್ನು ಬರೆಯುವ ಅವಶ್ಯಕತೆ ಇರಲಿಲ್ಲ ಕಾರಣ ಬರೆದಿಲ್ಲ. ಹಣವನ್ನು ಡಿಡಕ್ಟ ಮಾಡಿದ ಬಗ್ಗೆ ಲೆಡ್ಜರ್ ನಲ್ಲಿ ಮೇಲ್ಗಡೆ ಬರೆಯುತ್ತೇವೆ. ಆರೋಪಿ ಕೇಳಿದರೆ ಲೆಡ್ಜರ್ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಕಂಪ್ಯೂಟರ್ ಸ್ಟೆಟಮೆಂಟ್ ಕೊಟ್ಟಿದ್ದೇವೆ ಎಂದು ನುಡಿದಿರುತ್ತಾರೆ . ಕಂಪ್ಯೂಟರ್ ಸ್ಟೆಟಮೆಂಟ್ ನಿಪಿ.17 ಮತ್ತು 18 ರಲ್ಲಿ ಹಣವನ್ನು ಡಿಡಕ್ಟ ಮಾಡಿದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ.17 ಮತ್ತು 18 ರಲ್ಲಿ ಸಾಲದ ಸಂಪೂರ್ಣ ಹಣವನ್ನು ನಗದಾಗಿ ನೀಡಿದ್ದೇವೆ ಎಂದು ಬರೆದಿದ್ದೇವೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.